ಅ) ದಾವಣಗೆರೆ ನಗರದ ಎಲ್ಲಾ ರಸ್ತೆಗಳು ಸಂಚಾರಕ್ಕೆ ಸಾಧ್ಯವಾಗದಂತಹ ದುಸ್ಥಿತಿಯಲ್ಲಿರುವ ವಿಚಾರ ನಿಜವಲ್ಲವೇ?

ಆ) ಸದರಿ ನಗರದಲ್ಲಿ ರಸ್ತೆ ಚರಂಡಿ ಹಾಗೂ ಒಳಚರಂಡಿಯ ವ್ಯವಸ್ಥೆಯೂ ಕೂಡ ಸರಿಯಾಗಿಲ್ಲದಿರುವುದು ನಿಜವಲ್ಲವೇ?

ಇ) ಇವುಗಳನ್ನು ಸರಿಪಡಿಸಲು ಕಳೆದ ಸಾಲಿನಲ್ಲಿ ವಿಶೇಷ ಅನುದಾನ ನೀಡುವುದಾಗಿ ತಿಳಿಸಿದ್ದರೂ ಸಹ ಇನ್ನು ಮೇಲ್ಕಂಡ ಕೆಲಸಗಳು ಕಾರ್ಯಗತವಾಗದಿರಲು ಕಾರಣಗಳೇನು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು):

ಅ) ಹೌದು.

ಆ) ಹೌದು.

ಇ) ಇತ್ತೀಚಿನ ವರ್ಷಗಳಲ್ಲಿ ವಿಶೇಷ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ. ಒಳಚರಂಡಿ ವ್ಯವಸ್ಥೆ, ರಸ್ತೆಯ ಚರಂಡಿಗಳು ಹಾಗೂ ರಸ್ತೆ ರಿಪೇರಿ ಕಾರ್ಯಗಳನ್ನು ಆರ್ಥಿಕ ಪರಿಸ್ಥಿತಿ ಅನುಗುಣವಾಗಿ ಅಧ್ಯತೆಯ ಆಧಾರದ ಮೇಲೆ ಕಳೆದ 2 ವರ್ಷಗಳಿಂದಲೂ ಕಾರ್ಯನಿರ್ವಹಿಸಲಾಗುತ್ತಿದೆ. ಹಾಗೂ 2 ಲಕ್ಷ ರೂಪಾಯಿಗಳ ವಿವೇಚನಾತ್ಮಕ ಅನುದಾನವನ್ನು ಬಿಡುಗಡೆ ಮಾಡಿದ್ದು ಇದು ಈಗಾಗಲೇ ಖರ್ಚಾಗಿದೆ.

**ಬಸವಕಲ್ಯಾಣ ಪಟ್ಟಣಕ್ಕೆ ಕುಡಿಯುವ ನೀರಿನ ತೊಂದರೆ ಬಗ್ಗೆ.**

3228 - ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವ ಕಲ್ಯಾಣ ಪಟ್ಟಣದ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಚುಳಕಿ ನಾಲಾ ನೀರಾವರಿ ಯೋಜನೆಯ ಅಡಿಯಲ್ಲಿ ಸದರೀ ಪಟ್ಟಣಕ್ಕೆ ಕುಡಿಯುವ ನೀರು ವ್ಯವಸ್ಥೆ ಮಾಡಲು ಈಗಾಗಲೇ ಸರ್ವೆಯಾಗಿಯತ್ತದೆ. ಹಾಗೂ ಮಾನ್ಯ ಮಂತ್ರಿಗಳು ರೂ.ನಾಲ್ಕು ಕೋಟಿಗಳನ್ನು ಖರ್ಚು ಮಾಡುವುದಾಗಿ ಸಭೆಗೆ ಆಶ್ವಾಸನೆ ಕೊಟ್ಟಿದ್ದರು ಇದುವರೆವಿಗೂ ತಾವು ಕ್ರಮ ಕೈಗೊಳ್ಳದಿರಲು ಕಾರಣಗಳೇನು?

ಇ) ಹೈದ್ರಾಬಾದ್ ಕರ್ನಾಟಕ ಯೋಜನೆಯಡಿಯಲ್ಲಿ ಮಂಜೂರಾತಿ ಮಾಡಿ ಶೀಘ್ರವಾಗಿ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)

ಅ) ಹೌದು.

ಆ) ಚುಳಕಿ ನಾಲಾ ನೀರಾವರಿ ಯೋಜನೆಯಡಿಯಿಂದ ಸದರಿ ಪಟ್ಟಣಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ರೂ. ನಾಲ್ಕು ಕೋಟಿಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿತ್ತು. ಇದನ್ನು ಪುನರ್ ಪರಿಶೀಲಿಸಿ ರೂ.335 ಲಕ್ಷಗಳಿಗೆ ಸೀಮಿತ ಗೊಳಿಸಿ ಆವಶ್ಯಕತಾತ್ಮಕ ಅನುಮೋದನೆಗಾಗಿ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಹೌದು.